ಕರ್ನಾಟಕ ಸರ್ಕಾರ

## ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಐವಾನ್-ಎ-ಶಾಹಿ ಬಡಾವಣೆ ಗುಲಬರ್ಗಾ

ಸಂಖ್ಯೆ:ಸಿ4(1)ಪ್ರೌಶಾಶಿ/ಶಿ.ಸೇ.ವಿ.ಮಾಹಿತಿ/64/2011-12 ದಿನಾಂಕ:07/05/2012

### ಜ್ಞಾಪನಾ

ವಿಷಯ:- ಸಾರ್ವಜನಿಕ ಶಿಕ್ಷಣ ಇಲಾಖೆಯ ಗುಲಬರ್ಗಾ ವಿಭಾಗಮಟ್ಟದ ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ:1) ಸರ್ಕಾರದ ಧಿಸೂಚನೆ ಸಂಖ್ಯೆ:ಡಿ.ಪಿ.ಎ.ಆರ್-12/ಎಸ್.ಡಿ.ಇ/2007 ದಿನಾಂಕ:29-01-2008
2)ಸರ್ಕಾರದ ಪತ್ರ ಸಂಖ್ಯೆ:ಇಡಿ-250/ಡಿ.ಪಿ.ಎ.ಆರ್-12?ಎಸ್.ಡಿ.ಇ/2007 ದಿ:29-01-2008
3) ಈ ಕಾರ್ಯಾಲಯದ ಸಮ ಪತ್ರ:ಶಿ.ಸೇವಾ ಪ್ರಕರಣ/64/2011-12 ದಿ:06-01-2012.
4) ಈ ಕಾರ್ಯಾಲಯದ ಸಮ ಪತ್ರ:ಶಿ.ಸೇವಾ ಪ್ರಕರಣ/64/2011-12 ದಿ:01-03-2012.
5) ಈ ಕಾರ್ಯಾಲಯದ ಅರೆ ಸರ್ಕಾರಿ ಪತ್ರ ದಿನಾಂಕ: 30/03/2012.
6) ಗುಲಬರ್ಗಾ ವಿಭಾಗದ ಎಲ್ಲಾ ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಸಲ್ಲಿಸಿರುವ ದೃಢೀಕರಣ ಪತ್ರದ ಪ್ರಕಾರ.

*/*/*/*/*/*/*

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (01) ರ ಸರ್ಕಾರಿ ಅಧಿಸೂಚನೆ ಹಾಗೂ ಉಲ್ಲೇಖ (02) ರ ಸರ್ಕಾರಿ ಸುತ್ತೋಲೆಯಂತೆ ಗುಲಬರ್ಗಾ ವಿಭಾಗದ ಸರ್ಕಾರಿ ಪ್ರೌಢ ಶಾಲೆಗಳಲ್ಲಿನ ಮುಖ್ಯಗುರುಗಳ ಗ್ರೂಪ - ಬಿ ವೃಂದದ ಹಾಗೂ ತತ್ಸಮಾನ ವೃಂದದ ಹುದ್ದೆಗಳಿಗೆ ಬಡ್ತಿ ನೀಡಲು ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಗುಲಬರ್ಗಾ ಇವರಿಗೆ ನೇಮಕಾತಿ ಪ್ರಾಧಿಕಾರವೆಂದು ಗುರುತಿಸಿರುತ್ತಾರೆ.

ಅದರಂತೆ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹ ಶಿಕ್ಷಕರ ವಿಭಾಗ ಮಟ್ಟದ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ (03) ರನ್ವಯ ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಯಲ್ಲಿ ಶಿಕ್ಷಕರ ಸೇವಾ ವಿವರದ ಮಾಹಿತಿಯನ್ನು ಆನ್‌ಲೈನ್ ಮೂಲಕ ಭರ್ತಿ ಮಾಡಲು ವಿಭಾಗದ ಎಲ್ಲಾ ಸರಕಾರಿ ಪ್ರೌಢಶಾಲಾ ಮುಖ್ಯಗುರುಗಳಿಗೆ ತಿಳಿಸಲಾಗಿತ್ತು, ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಯಲ್ಲಿ ಅನ್‌ಲೈನ್ ತಂತ್ರಾಂಶದ ಮೂಲಕ ಭರ್ತಿ ಮಾಡಿದ ತಾತ್ಕಾಲಿಕ ಜೇಷ್ಠತಾ ಪಟ್ಟಿ ತಯ್ಯಾರಿಸಿ ಆಕ್ಷೇಪಣೆ ಸಲ್ಲಿಸಲು ಉಲ್ಲೇಖಿತ (4) ರ ಪತ್ರದಲ್ಲಿ ತಿಳಿಸಲಾಗಿತ್ತು. ಈ ತಂತ್ರಾಂಶದಲ್ಲಿ ದಾಖಲಿಸಿದ ಮಾಹಿತಿಯನ್ನು ಪರಿಶೀಲಿಸಿದಾಗ ಬಹಳಷ್ಟು ಶಿಕ್ಷಕರ ಸೇವಾ ವಿವರದ ಮಾಹಿತಿಯಲ್ಲಿ ಆಕ್ಷೇಪಣೆ ಇದ್ದ ಕಾರಣ ಉಲ್ಲೇಖಿತ (5) ರ ಅರೆ ಸರ್ಕಾರಿ ಪತ್ರದ ಮೂಲಕ ವಿಭಾಗದ ಎಲ್ಲಾ ಉಪ ನಿರ್ದೇಶಕರಿಗೆ ಯಾವುದೇ ಶಿಕ್ಷಕರ ಆಕ್ಷೇಪಣೆ ಇದ್ದಲ್ಲಿ ಈ ಕಛೇರಿಗೆ ಮಾಹಿತಿ ಹಾಗೂ ದೃಢೀಕರಣ ಪತ್ರ ಸಲ್ಲಿಸಲು ತಿಳಿಸಲಾಗಿತ್ತು, ಉಲ್ಲೇಖಿತ (6) ರಲ್ಲಿ ಗುಲಬರ್ಗಾ ವಿಭಾಗದ ಎಲ್ಲಾ ಉಪ ನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆರವರು ಸಲ್ಲಿಸಿದ ದೃಢೀಕರಣ ಪತ್ರದ ಆಧಾರದ ಮೇಲೆ ಜೇಷ್ಠತಾ ಪಟ್ಟಿಯನ್ನು ಆಧರಿಸಿ ದಿನಾಂಕ 31-12-2011ರಲ್ಲಿದಂತೆ ಸರಕಾರಿ ಪ್ರೌಢಶಾಲಾ ಶಿಕ್ಷಕರ ಪರಿಷ್ಕೃತ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಪ್ರಕಟಿಸಿದೆ ಮತ್ತು ಕಛೇರಿಯ ವೆಬ್ ಸೈಟ್ (www.cpigulbarga.kar.nic.in) ನೋಡಬಹುದಾಗಿದೆ.

ಪು.ತಿ.ನೋ

ಷರತ್ತುಗಳು :-

1. ಅಂತಿಮ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಶಿಕ್ಷಕರ ಮಾಹಿತಿಯನ್ನು ಶಾಲೆಯ ಮುಖ್ಯ ಗುರುಗಳು/ ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿಯಲ್ಲಿ ಆನ್‌ಲೈನ್ ತಂತ್ರಾಂಶದಲ್ಲಿ ಭರ್ತಿ ಮಾಡಿದ ಸೇವಾ ವಿವರವನ್ನು ಆಧರಿಸಿ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಿದೆ.
2. ಅಂತಿಮ ತಾತ್ಕಾಲಿಕ ಜೇಷ್ಠತಾ ಪಟ್ಟಿಯು ಶಿಕ್ಷಕರ ವಿದ್ಯಾರ್ಹತೆ / ಜನ್ಮದಿನಾಂಕ / ಸೇವೆಗೆ ಸೇರಿದ ದಿನಾಂಕ /ಪ್ರಸ್ತುತ ಹುದ್ದೆಗೆ ಬಂದ ದಿನಾಂಕದ ಬಗ್ಗೆ ಮೂಲ ದಾಖಲೆಗಳನ್ನು ಪರಿಶೀಲನೆಗೆ ಒಪ್ಪಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
3. ಅಂತಿಮ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಶಿಕ್ಷಕರು ನಮೂದಿಸಿದಂತೆ, ಸೇವಾ ವಿವರದ ಮೂಲ ದಾಖಲೆಗಳನ್ನು ಹಾಗೂ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ದಾಖಲೆಗಳಿಗೆ ಪರಿಶೀಲನೆಗೆ ಒಪ್ಪಿಸುವ ಷರತ್ತಿಗೊಳಪಟ್ಟಿರುತ್ತದೆ.
4. ಉಪ ನಿರ್ದೇಶಕರು ತಪ್ಪಾಗಿ ಮಾಹಿತಿ ತಂತ್ರಾಂಶದಲ್ಲಿ ಅಳವಡಿಸಿದ್ದಲ್ಲಿ ಜೇಷ್ಠತಾ ಪಟ್ಟಿಯಲ್ಲಿ ಸೇವಾ ಜೇಷ್ಠತೆಯನ್ನು ಸರಿಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿರುತ್ತದೆ.
5. ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು/ಶಾಲೆಯ ಮುಖ್ಯಗುರುಗಳು ತಂತ್ರಾಂಶದಲ್ಲಿ ಅಳವಡಿಸಿರುವದರಿಂದ ಇದರಲ್ಲಿ ಯಾವುದೇ ಲೋಪಗಳು ಕಂಡುಬಂದಲ್ಲಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು/ಪ್ರೌಢ ಶಾಲೆಯ ಮುಖ್ಯಗುರುಗಳು ಜವಾಬ್ದಾರರಾಗಿರುತ್ತಾರೆ.

(ಸ್ಲಯದ ಖಲಂದರ)
ನಿರ್ದೇಶಕರು
ಆಯುಕ್ತರ ಕಛೇರಿ ಸಾರ್ವಜನಿಕ ಶಿಕ್ಷಣ ಇಲಾಖೆ
ಗುಲಬರ್ಗಾ

ಗೆ,

1) ವಿಭಾಗದ ಎಲ್ಲಾ ಉಪ ನಿರ್ದೇಶಕರಿಗೆ,
2) ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ,
3) ವಿಭಾಗದ ಎಲ್ಲಾ ಪ್ರೌಢ ಶಾಲಾ ಮುಖ್ಯಗುರುಗಳಿಗೆ,